ಭಯ ಬಾರದಿರಬೇಕೆಂದು ಹಾಗೆ ಹೇಳಿದೆ. ಈಗ ಮಾಡಿಕೊಂಡಿರತಕ್ಕ ಕರಾರು ವಾಯಿದೆ ಮುಗಿದು ಹೋದರೂ ಕೂಡ ಮತ್ತೆ ಎರಡು ಸರ್ಕಾರಗಳೂ ಅಗ್ರೀಮೆಂಟ್ ಮಾಡಿಕೊಳ್ಳಲು ಬರುತ್ತವೆ, ನಮ್ಮ ಹಕ್ಕು ಕಳೆದುಹೋಗುವುದಿಲ್ಲ, ಈ ಕಾರಣದಿಂದ (ಎ) ಗೆ ಇಲ್ಲ ಎಂತ ಉತ್ತರಕೊಡಲಾಗಿದ. ಇನ್ನು (ಬಿ) ಪ್ರಶ್ನೆಗೆ 50 ವರ್ಷದ ಅಗ್ರಿಮೆಂಟಿನಲ್ಲಿ 38 ವರ್ಷ ಕಳೆದಿದೆ, ಇನ್ನು 12 ವರ್ಷದಲ್ಲಿ ನಾವು ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬಹುದೋ ಅಷ್ಟನ್ನು ಉಪಯೋಗಿಸಿಕೊಳ್ಳುವ ಅಧಿಕಾರವಿದೆ ಎಂಬುದನ್ನು ಇಲ್ಲಿ ತಿಳಿಸಿದೆ.

ಶ್ರೀ ಇ. ನಾರಾಯಣ ಗೌಡ.—ಮದ್ರಾಸಿನವರು ಅಲ್ಲಿ ಪ್ರತಿವರ್ಷವೂ ಪ್ರಾಜೆಕ್‌ಗಳನ್ನು ಕಟ್ಟುತಕ್ಕ ಬಗ್ಗೆ ಮೈಸೂರು ಸರ್ಕಾರದವರ ಅಭಿಪ್ರಾಯ ಪಡೆಯುತ್ತಿದ್ದಾರೋ ಅಥವಾ ಅವರ ಪಾಡಿಗವರು ಆ ಕೆಲಸಗಳನ್ನು ಮುಂದುವರಿಸುತ್ತಿದ್ದಾರೋ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಪ್ರತಿವರ್ಷವೂ ಪ್ರಾಜೆಕ್ಟ್‌ಗಳನ್ನು ಕಟ್ಟಲು ಸಾಧ್ಯವಿಲ್ಲ. ಒಂದೊಂದು ಪ್ರಾಜೆಕ್ಟ್ ಕಟ್ಟಲು 10-15 ವರ್ಷ ಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ನಮ್ಮ ಸರ್ಕಾರದವರ ನಿಯೋಜಿತ ಕಾರ್ಯಕ್ರಮಗಳ ಪ್ರಕಾರ ನಮ್ಮ ಅಗ್ರೀಮೆಂಟ್‌ನಲ್ಲಿ ಈಗಿರತಕ್ಕ ಹಕ್ಕಿನ ನೀರೆಷ್ಟಿದೆಯೋ ಅದೆಲ್ಲವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿದೆ ಎಂಬ ನಂಬಿಕೆ ನಮ್ಮ ಸರ್ಕಾರದವರಿಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲರೂ ಸಹಕರಿಸಿದರೆ ನಂಬಿಕೆ ಇದ್ದೇ ಇದೆ.

ಶ್ರೀ ಎಸ್. ರಾಮೇ ಗೌಡ.—ಕಾವೇರಿ ನದಿ ನೀರನ್ನು ಕೋಲಾರಕ್ಕೆ ಕೊಡತಕ್ಕ ಯೋಜನೆ ಏನಾದರೂ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗಾಗಲೇ ಅಂದಾಜು ತಯಾರಾಗಿದ್ದು ಬಡ್ಜೆಟ್‌ನಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸಿರುತ್ತೀರಿ. Technical clearance ಆಗುವುದಕ್ಕಾಗಿ ನಿಧಾನ ಮಾಡದೆ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

2-00 P.M.

ಶ್ರೀ ಎಸ್. ನಿಜಲಿಂಗಪ್ಪ.—Technical clearance ಆದಷ್ಟು ಬೇಗ ಬರುತ್ತದೆ. ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ತಯಾರಾಗುತ್ತಿದೆ.

Mr. SPEAKER.—Question hour is over.

Member's Representation.

Sri S. SIVAPPA (Sravanabelagola).—Sir, you were pleased to hold over one of my questions regarding the Sharavathi Project last time as the Hon'ble Minister wanted some time to furnish the answer. Still they have not got any answer ready. Will you please see that the answers are got ready early ?

Mr. SPEAKER.—I will take note of it.

ಶ್ರೀ ಬಿ. ಎಲ್. ಗೌಡ (ಚಿಕ್ಕಳಕೆರೆ).—ಸ್ವಲ್ಪ ದಿವಸದ ಹಿಂದೆ ಮಾನ್ಯ ವಿದ್ಯಾ ಸಚಿವರು ಶ್ರೀಮಾನ್ ಮುಕ್ಕಣ್ಣಪ್ಪನವರನ್ನು ಸಂಬೋಧಿಸಿ ಸರಿಯಾದ ಮಾತನ್ನು ಉಪಯೋಗಿಸಲಿಲ್ಲವೆಂದು ಒಂದು ಕ್ರಿಯಾಲೋಪವನ್ನು ತಂದಿದ್ದೆ. ಇದುವರೆಗೂ ಅದರ ತೀರ್ಮಾನವಾಗಿಲ್ಲ.

Mr. SPEAKER.—Yes. I remember it.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಚನ್ನಪಟ್ಟಣ ತಾಲ್ಲೂಕು ಬೈರಾಪಟ್ಟಣದಲ್ಲಿ ಪೋಲೀಸಿನವರು.....

Mr. SPEAKER.—I have disallowed it.

ಶ್ರೀ ಕೆ. ಲಕ್ಕಪ್ಪ.—ತಮ್ಮ ರೂಲಿಂಗ್ ಮೇಲೆ ಪ್ರಶ್ನೆ ಮಾಡುತ್ತಿಲ್ಲ. ಬಹಳ ಜನಗಳಿಗೆ ಏಟು ಬಿದ್ದಿದೆ. ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ವಿಚಾರಣೆ ನಡೆಸಲು direction ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.